ಕರ್ನಾಟಕದಲ್ಲಿ ಸೇಂದಿ ಮಾರಾಟವನ್ನು ಸಂಪೂರ್ಣವಾಗಿ ನಿಷೇದಿಸಲಾಗಿರುವ ಬಗ್ಗೆ ಕುರಿತು

814 - ಡಾ. ಜಿ. ಪರಮೇಶ್ವರ (ಮಧುಗಿರಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಶೇಂದಿ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆಯೇ?

ಆ) ಗಡಿ ಪ್ರದೇಶಗಳಲ್ಲಿ ಶೇಂದಿ ಮಾರಾಟವಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದಿಂದ ಕೈಗೊಂಡ ಅಥವಾ ಕೈಗೊಳ್ಳಬೇಕಾದ ಕ್ರಮಗಳೇನು?

ಶ್ರೀ ಕೆ. ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು):

ಅ) ಹೌದು. ದಕ್ಷಿಣ ಕನ್ನಡ ಜಿಲ್ಲೆಯನ್ನು ಹೊರತುಪಡಿಸಿದೆ.

ಆ) ಇಲ್ಲ

ಇ) (ಅ) ಗೆ ನೀಡಿರುವ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭವನವನ್ನು ನಿರ್ಮಿಸುವುದರ ಬಗ್ಗೆ ಕುರಿತು

815 - ಡಾ.ಜಿ. ಪರಮೇಶ್ವರ (ಮಧುಗಿರಿ) : ಮಾನ್ಯ ಯುವಜನ ಸೇವಾ ಕ್ರೀಡಾ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಡಾ; ಅಂಬೇಡ್ಕರ್ ಭವನವನ್ನು ನಿರ್ಮಿಸಲು ಕರ್ನಾಟಕ ಸರ್ಕಾರ ಹಣವನ್ನು ಕಾಯ್ದಿರಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಕಾಯ್ದಿರಿಸಿರುವ ಒಟ್ಟುಹಣ ಎಷ್ಟು?

ಇ) ನಿರ್ಮಾಣ ಕೆಲಕವನ್ನು ಇದುವರೆಗೆ ತೆಗೆದುಕೊಂಡಿಲ್ಲದಿರುವುದು ನಿಜವೇ?

ಈ) ತಕ್ಷಣವೇ ನಿರ್ಮಾಣ ಕೆಲಸವನ್ನು ಸರ್ಕಾರ ಪ್ರಾರಂಭಿಸುವುದೇ?

ಶ್ರೀ ಎಸ್. ರಮೇಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ ಸಚಿವರು)

ಅ) ಹೌದು

ಆ) ಇದುವರೆಗೆ ಬಿಡುಗಡೆ ಮಾಡಲಾಗಿರುವ ಮೊತ್ತ ರೂ.15.00ಲಕ್ಷ

ಇ) ಹೌದು

ಈ) ಹೌದು

ತುಮಕೂರು ಜಿಲ್ಲೆಯಲ್ಲಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಕುರಿತು

382 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿರುವ ಒಟ್ಟು ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಆ) ಈ ವಿದ್ಯಾರ್ಥಿನಿಲಯಗಳಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಇ) *1990-91ನೇ ಸಾಲಿನಲ್ಲಿ ಪ್ರತಿ ವಿದ್ಯಾರ್ಥಿ ನಿಲಯಕ್ಕೆ ಮಂಜೂರು ಮಾಡಲ್ಪಟ್ಟ ಅನುದಾನದ ಮೊತ್ತ*

ಈ) *ಪ್ರಸ್ತುತ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಪ್ರಾರಂಭಮಾಡಲಿರುವ ಹೊಸ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳು ಎಷ್ಟು?*

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):

ಅ) ಸರ್ಕಾರಿ ವಿದ್ಯಾರ್ಥಿನಿಲಯಗಳು 36

ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳು 3

ಖಾಸಗಿ ಅನುದಾನರಹಿತ ವಿದ್ಯಾರ್ಥಿ ನಿಲಯಗಳು 1

ಆ) 1942

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ 46.68.ಲಕ್ಷ

ಆಯವ್ಯಯದಲ್ಲಿ ಒದಗಿಸಲಾದ ಹಣ ರೂ.ಗಳು

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ 9.78ಲಕ್ಷ

ಆಯವ್ಯಯದಲ್ಲಿ ಒದಗಿಸಲಾದ ಹಣ ರೂ.ಗಳು

ಖಾಸಗಿ ಅನುದಾನಿತ ವಸತಿ ನಿಲಯಗಳಿಗೆ 0.145 ಲಕ್ಷ

ನೀಡಲಾದ ಅನುದಾನದ ಹಣರೂಗಳು

ಈ) 2 ಹೊಸ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಡಿಸೆಂಬರ್ 1990ರ ಅಂತ್ಯದವರೆಗೆ ರಾಜ್ಯಕ್ಕೆ ಬಂದಿರುವ ಅಬಕಾರಿ ಆದಾಯದ ಬಗ್ಗೆ

383 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1ನೇ ಏಪ್ರಿಲ್ 1990 ರಿಂದ ಡಿಸೆಂಬರ್ 1990ರ ಅಂತ್ಯದವರೆಗೆ ರಾಜ್ಯಕ್ಕೆ ಬಂದಿರುವ ಒಟ್ಟು ಅಬಕಾರಿ ಆದಾಯವೆಷ್ಟು?*

ಆ) *1ನೇ ಏಪ್ರಿಲ್ 1989 ರಿಂದ ಡಿಸೆಂಬರ್ 1989ರ ಅಂತ್ಯದವರೆಗಿನ ಆ ಸಂಬಂಧದ ಆದಾಯವೆಷ್ಟು?*

ಇ) *ಪ್ರಸಕ್ತ ಸಾಲಿನಲ್ಲಿ ಅಬಕಾರಿ ಆದಾಯದ ವಸೂಲಿಯಲ್ಲಿ ಹೆಚ್ಚುವರಿ ಆಗಿರುವುದೇ?*

ಈ) *ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು?*

ಶ್ರೀ ಕೆ. ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು)

ಅ) ರೂ.310.11 ಕೋಟಿ

ಆ) ರೂ.234.85ಕೋಟಿ

ಇ) ಹೌದು

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.